RA No. 18/2024
AW1.

Witness is called out and duly sworn on 31-07-2025:

**Further examination in chief : By Sri NSRB Advocate.**

I have filed my affidavit inlieu of additional evidence. I know the contents of the affidavit and it bears my signature.

I am producing following documents.

Ex.P6 – C/c of Suit register extract of O.S No. 126/1955

Ex.P7 – C/c of registered settlement deed dated: 07-11-1977

Ex.P8 – C/c of registered partition deed dated: 30-05-2012

Ex.P9 – C/c of registered sale deed dated: 11-04-1911

Ex.P10 – C/c of registered sale deed dated: 09-03-1928

I have produced Certified copies of sale deeds dated 11-04-1911 and 09-03-1928 because, the originals are lost by ant bite.

**For further Cross Examination : Deferred at request.**

(Typed and dictated by me in open court)

II Addl. District and Sessions Judge,
Udupi

**ದಿನಾಂಕಃ 29-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ** ಎದುರುದಾರ 2 ರಿಂದ 7 ರ ಪರವಾಗಿ ಶ್ರೀ ಕೆ.ಸಿ.ಎಸ್ ವಕೀಲರಿಂದಃ

ನಿ.ಪಿ 6 ರಲ್ಲಿ ಕಂಡು ಬರುವ ಪ್ರತಿವಾದಿಗಳು ನನ್ನ ಕುಟುಂಬದ ಹಿರಿಯರು ಎಂದರೆ ಸರಿಯಲ್ಲ. ನಿ.ಪಿ 6 ರಲ್ಲಿರುವ ವಾದಿ ಯಾರು ಎಂದು ಗೊತ್ತಿಲ್ಲ. ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. 2 ನೇ ಮೇಲ್ಮನವಿದಾರರು ನನ್ನ ಚಿಕ್ಕಮ್ಮ. ಆಕೆ ಮೂಲದಾವೆಯಲ್ಲಿ ನೀಡಿರುವ ಸಾಕ್ಷಿ ಸರಿಯಿರುವುದಿಲ್ಲ. ಆಕೆ ನನಗಿಂತ ಸುಮಾರು 30 ವರ್ಷ ಹಿರಿಯರು. ಮೂಲದಾವೆಯಲ್ಲಿ ಸಾಕ್ಷಿ ನೀಡಿರುವ ಗೋಪಾಲ ಶೆಟ್ಟಿ ನನ್ನ ದೊಡ್ಡಮ್ಮನ ಮಗ. ಆತ ನನಗಿಂತ ಸುಮಾರು 25 ವರ್ಷ ಹಿರಿಯರು. ಆತ ಮೂಲದಾವೆಯಲ್ಲಿ ಏನು ಸಾಕ್ಷಿ ನೀಡಿದ್ದಾರೆ ಸರಿಯಾಗಿ ಗೊತ್ತಿಲ್ಲ. ನನ್ನ ಚಿಕ್ಕಮ್ಮ ಮತ್ತು ದೊಡ್ಡಮ್ಮನ ಮಗನಿಗೆ ದಾವಾ ಆಸ್ತಿಯ ಬಗ್ಗೆ ನನಗಿಂತ ಹೆಚ್ಚಿನ ಮಾಹಿತಿ ಇದೆ ಎಂದರೆ ಸರಿಯಲ್ಲ. ನಾನು 1965 ರಲ್ಲಿ ಹುಟ್ಟಿದ್ದೇನೆ. ಮೂಲದಾವೆ ಸಂಖ್ಯೆ 126/1955 ರಲ್ಲಿ ಯಾವ ಬಗೆಯ ಡಿಕ್ರಿ ಆಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ಸದ್ರಿ ದಾವೆಯ ಪ್ರತಿವಾದಿಗಳಿಗೆ ದಾವಾ ಆಸ್ತಿಗಳು ಮೂಲತಃ ಸೇರಿವೆ ಎನ್ನುವ ಬಗ್ಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲದೆ ಇರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ವಿಟ್ಟಲ ಶೆಟ್ಟಿಯವರು ದಾವಾ ಆಸ್ತಿಯನ್ನು ನ್ಯಾಯಾಲಯದ ಆಕ್ಷನ್ ಪ್ರಕಾರ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅವರು ಆ ರೀತಿ ಪಡೆದ ನಂತರ ಸದ್ರಿ ಆಸ್ತಿಯನ್ನು ಲಕ್ಷ್ಮೀ ಶೆಟ್ಟಿಯವರಿಗೆ ವ್ಯವಸ್ಥಾ ಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಲಕ್ಷ್ಮೀ ಶೆಟ್ಟಿ ತೀರಿಕೊಂಡ ನಂತರ ಆಕೆಯ ಮಕ್ಕಳು ಸದ್ರಿ ಆಸ್ತಿಯ ಪಾಲು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆಕ್ಷನ್ ಪ್ರಕ್ರಿಯೆಯಲ್ಲಿ ನಾವು ಮತ್ತು ನಮ್ಮ ಹಿರಿಯರು ಯಾರು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ, ನಮ್ಮ ಆಸ್ತಿ ನ್ಯಾಯಾಲಯದ ಮೂಲಕ ಆಕ್ಷನ್ ಆಗಿಲ್ಲ ಎನ್ನುತ್ತಾರೆ. ದಾವಾ ಆಸ್ತಿ ನಮಗೆ ಮತ್ತು ನಮ್ಮ ಹಿರಿಯರಿಗೆ ಯಾವತ್ತೂ ಸೇರಿಲ್ಲ ಮತ್ತು ನಾವು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ.

3. ಸರ್ವೇ ನಂಬ್ರ 17/9 ಇವತ್ತಿಗೂ ಸಹ ಸುಮತಿ ಶೆಟ್ಟಿ ಹೇಮಾವತಿ ಶೆಟ್ಟಿ ಮತ್ತು ಇತರರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಹಕ್ಕು ಮತ್ತು ಸ್ವಾಧೀನ ನಮಗೆ ಇದೆ ಎನ್ನುತ್ತಾರೆ. ಸರ್ವೇ ನಂಬ್ರ

18/9 ನಮ್ಮ ಹೆಸರಿನಲ್ಲಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಸ್ವಾಧೀನದಲ್ಲಿದೆ ಎನ್ನುತ್ತಾರೆ. ದಾವಾ ಆಸ್ತಿಗಳು ನಮ್ಮ ಸ್ವಾಧೀನದಲ್ಲಿದೆ ಎಂದು ತೋರಿಸಲು ದಾಖಲೆ ಇಲ್ಲ. ಯಾವತ್ತೂ ನಾವಾಗಲಿ, ನಮ್ಮ ಹಿರಿಯರಾಗಲಿ ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.